ಅ) ಆಯವ್ಯಯ ಚರ್ಚೆ ವೇಳೆಯಲ್ಲಿ ನೀಡಿದ್ದ ಆಶ್ವಾಸನೆ ಇಲಾಖೆಯ ಗಮನಕ್ಕೆ ಬಂದಿಲ್ಲ, ಹಾಗೂ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಭೂಸೇನ ನಿಗಮದ ಕಟ್ಟಡಗಳ ಕಳಪೆ ನಿರ್ಮಾಣ

199 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸೇನೆಗೆ ಸರ್ಕಾರ ವಹಿಸಿರುವ ಕಟ್ಟಡಗಳ ಗುಣಮಟ್ಟ ತೀರಾ ಕಳಪೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಆ) ಭೂ ಸೇನೆಯು ವಹಿಸಿಕೊಂಡಿರುವ ಕಟ್ಟಡಗಳ ಅಂದಾಜು ವೆಚ್ಚ ಲೋಕೋಪಯೋಗಿ ಇಲಾಖಾ ಕಟ್ಟಡಗಳ ಅಂದಾಜಿಗಿಂತ ಹೆಚ್ಚಾಗಿಲ್ಲವೆ?

ಇ) ಕರ್ನಾಟಕ ಭೂ ಸೇನೆಯು ತನ್ನ ಇಲಾಖೆ ವತಿಯಿಂದ ಕಟ್ಟಡ ನಿರ್ಮಾಣ ಕೆಲಸ ಕೈಗೊಳ್ಳುತ್ತಿದೆಯೇ ಅಥವಾ ಸಬ್ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಹೌದು. ಕಾರಣ, ಭೂ ಸೇನಾ ನಿಗಮದ ಅಂದಾಜು ಪಟ್ಟಿಯಲ್ಲಿ ನಿರ್ವಹಣಾ ವೆಚ್ಚವು ಸೇರಿರುವುದರಿಂದ.

ಇ) ಭೂ ಸೇನಾ ನಿಗಮವು ಇಲಾಖಾ ವತಿಯಿಂದ ಮಾತ್ರ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.

ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವುದರ ಬಗ್ಗೆ

198 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ತನ್ನ ಒಡೆತನದ ಯಾವ ಯಾವ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಯೋಜಿಸಿದೆ.

ಆ) ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳೆಷ್ಟು ಮತ್ತು ಪ್ರತಿ ಕಾರ್ಖಾನೆಯ ನಷ್ಟದ ಮೊಬಲಗೆಷ್ಟು?

ಇ) ಸರ್ಕಾರಿ ಒಡೆತನದ ಕಾರ್ಖಾನೆಗಳು ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದಕ್ಕೆ ಕಾರಣಗಳನ್ನು ಕಂಡುಹಿಡಿಯಲಾಗಿದೆಯೇ ಹಾಗೂ ಅವುಗಳ ಪುನಃಶ್ಚೇತನ ಸಾಧ್ಯವಿಲ್ಲವೇ?

ಶ್ರೀ ರಾಮಲಿಂಗಾರೆಡ್ಡಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕೇ ಅಥವಾ ಬೇಡವೇ ಎಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 17

ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳ ಹೆಸರುಗಳ ಪಟ್ಟಿ ಮತ್ತು ವಿ[illegible]

		ಲಕ್ಷ ರೂ.	ವರ್ಷ
1)	ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ (ಎನ್.ಜಿ.ಇ.ಎಫ್.	92-93	92-93
2)	ಕರ್ನಾಟಕ ಚರ್ಮ ಕೈಗಾರಿಕಾ ನಿಗಮ (ಲಿಡ್ಕರ್)	491.02	94-95
3)	ಮೈಸುಗರ್	203	92-93
4)	ಮೈಸೂರು ಕಾಗದ ಕಾರ್ಖಾನೆ	5709.82	92-93
5)	ಕರ್ನಾಟಕ ರಾಜ್ಯ ತೆಂಗು ನಾರಿನ ಅಭಿವೃದ್ಧಿ ನಿಗಮ	36.53	92-93
6)	ಕರ್ನಾಟಕ ವಿದ್ಯುತ್ ಕಾರ್ಖಾನೆ	113.59	92-93
7)	ಕಿಯೋನಿಕ್ಸ್	926.96	92-93
8)	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	9189.58	92-93
9)	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್	893.58	92-93
10)	ಕಿಮ್ಕೋ	2253.81	92-93
11)	ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕೆ ನಿಗಮ	2266.86	92-93
12)	ಕರ್ನಾಟಕ ರಾಜ್ಯ ಟೆಕ್ಸ್ಟೈಲ್ಸ್ ಲಿ.	327.82	92-93
13)	ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್	370.11	92-93
14)	ಮೈಸೂರು ಕ್ರೋಂ ಟ್ಯಾನಿಂಗ್ ಲಿಮಿಟೆಡ್	746.36	92-93
15)	ಚಾಮುಂಡಿ ಮೆಷಿನ್ ಟೂಲ್ಸ್	252.83	92-93
16)	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ	215.30	89-90
17)	ಮೈಸೂರು ಕಾಸ್ಮೆಟಿಕ್ಸ್	28.30	90-91

ಬೆಳವಡಿ ಮಲ್ಲಮ್ಮನ ಬೆಳವಡಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

137 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೆಳವಡಿಯಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಆ) ಬೆಳವಡಿ ಗ್ರಾಮದಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಮಾಡುವುದು ಅತಿ ಅವಶ್ಯವಿದ್ದು, ಸರ್ಕಾರದವರು ಆದ್ಯತೆಯ ಮೇರೆಗೆ ಕಿತ್ತೂರು ಚೆನ್ನಮ್ಮನ ಅಭಿವೃದ್ಧಿ ಕೆಲಸ ಮಾಡಿದಂತೆ ಇಲ್ಲಿಯೂ ಕೂಡ ಎಲ್ಲಾ ರೀತಿಯಲ್ಲಿಯೂ ಅಭಿವೃದ್ಧಿ ಮಾಡುವರೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ